# ಹೊಸ ನಮೂನೆಯ ಬಾಲ್ಯ



ಮೊಬೈಲ್ ರೂಪದಲ್ಲಿ ಶಾಲೆಯೇ ಮನೆಗೆ ಬಂದಿದೆ. ಆ ಮೂಲಕ, ಮಕ್ಕಳ ಜೊತೆಗೆ ಅಮ್ಮಂದಿರಿಗೂ ಸವಾಲುಗಳು ಹೆಚ್ಚಾಗಿವೆ.

■ ಸ್ವಯಂಪ್ರಭಾ

ಶಾಲೆಗಳು ಮಕ್ಕಳಿಗಾಗಿ ಬಾಗಿಲು ತೆರೆದಿಲ್ಲ. ಶಾಲೆಯೇ ಮೊಬೈಲ್ ರೂಪದಲ್ಲಿ ಮಕ್ಕಳ ಮನೆಗೆ, ಕೈಗೆ ಬಂದಿದೆ. ಒಂದೊಂದು ಮನೆಯಲ್ಲಿಯೂ ಒಂದೊಂದು ರೀತಿಯಲ್ಲಿ ಶಾಲೆಗೆ ಸ್ವಾಗತ ಸಿಗುತ್ತಿದೆ. ಪ್ರತಿಯೊಂದು ಮಗುವೂ ಭಿನ್ನವೆಂದ ಮೇಲೆ, ಪ್ರತೀ ಮಗುವೂ ಶಾಲೆಯ ಪಾಠಗಳಿಗೆ ಪ್ರತಿಕ್ರಿಯಿಸುವ ರೀತಿಯೂ ಭಿನ್ನವೇ ಅಲ್ಲವೇ.

ಕಳೆದ ವಾರವಷ್ಟೇ ಪೂರ್ವಿಗೆ ಮನೆಯ ಪಕ್ಕದ ಶಾಲೆಯಲ್ಲಿ ಪ್ರವೇಶ ದೊರೆಯಿತು. ಎಲ್‌ಕೆಜಿಗೆ ಫೀಸು ಕಟ್ಟಿ 20ಕ್ಕೂ ಹೆಚ್ಚು ಪುಸ್ತಕಗಳನ್ನು ಶಾಲೆಯಿಂದ ಮನೆಗೆ ಹೊತ್ತುಕೊಂಡು ಬಂದರು ಪೂರ್ವಿಯ ಅಮ್ಮ ಪರಿಮಳ. ಪ್ರತೀದಿನ ಸಂಜೆ ಅರ್ಧಗಂಟೆ ಕ್ಲಾಸು. ಅತ್ತಿಂದಿತ್ತ ಓಡುವ ಮಗಳನ್ನೂ ಹಿಡಿದು ತಂದು ಮೊಬೈಲ್ ಮುಂದೆ ಕುಳ್ಳಿರಿಸುವುದು ಅಮ್ಮನ ಕೆಲಸ. ಹಾಜರಾತಿಯನ್ನು ಗುರುತು ಹಾಕುವಷ್ಟರಲ್ಲಿ ಹತ್ತು ನಿಮಿಷ ಮುಗಿದು, ಅಕ್ಷರಗಳನ್ನು ತಿದ್ದುವುದು ಹೇಗೆ ಎಂದು ಟೀಚರ್ ಒಂದು ಸ್ಲೇಟ್ ಹಿಡಿದು ಹದಿನೈದು ನಿಮಿಷಗಳ ಕಾಲ ತೋರಿಸುತ್ತಿದ್ದರು. ನಂತರ ಅಮ್ಮನೇ ಅಕ್ಷರಗಳನ್ನು ತಿದ್ದಿ ತೋರಿಸಬೇಕು.

ತಾನು ಚಂದ ಬರೆದೆನೆಂದು ಹೆಮ್ಮೆ ಪಟ್ಟುಕೊಳ್ಳಲು ಮಗುವಿಗೆ ಸ್ನೇಹಿತರಿಲ್ಲ. 'ಗುಡ್, ಶಹಬ್ಬಾಸ್' ಎನ್ನಲು ಟೀಚರ್ ಇಲ್ಲ. ಟೀಚರ್ ಸೀರೆಯನ್ನು ಕಂಡು, ತೋರು ಬೆರಳಿನಲ್ಲಿ ನವಿರಾಗಿ ಸೀರೆಯನ್ನು ಮುಟ್ಟುವುದಕ್ಕೆ ಅವಕಾಶವಿಲ್ಲ. ಢಣ ಢಣ ಬಾರಿಸುವ ಗಂಟೆಯಿಲ್ಲ. 'ಇಲ್ಲ'ಗಳೇ ಹೆಚ್ಚಾಗಿರುವ ಸ್ಥಿತಿಯಲ್ಲಿ ಕಲಿಸುವ ಅಮ್ಮನಿಗೆ ಪದೇ ಪದೇ ತನ್ನ ಬಾಲ್ಯ ನೆನಪಾಗುತ್ತಿತ್ತು. ಕೆಲವೇ ವರ್ಷಗಳ ಹಿಂದ ಹೈಸ್ಕೂಲು ದಾಟಿದ ದೊಡ್ಡ ಮಗನ ಬಾಲ್ಯ ನೆನಪಾಗುತ್ತಿತ್ತು

ಅಪ್ಪ ಅಮ್ಮಂದಿರು ಮಕ್ಕಳನ್ನು ಸಾಕುವಾಗ ಪ್ರತೀ ಹೆಜ್ಜೆಯಲ್ಲಿಯೂ ತಮ್ಮ ಬಾಲ್ಯವನ್ನು ನೆನಪಿಸಿಕೊಳ್ಳುವುದು ಸಹಜ. ತಮ್ಮ ತಂಗಿಯಂದಿರ, ದೊಡ್ಡ ಮಕ್ಕಳ ಬಾಲ್ಯದ ಕತೆಗಳು ಅಪ್ಪ ಅಮ್ಮನ ಮಾತುಗಳಲ್ಲಿ ಹಾದು ಹೋಗುವುದು ವಿಶೇಷವೇನಲ್ಲ. ಅವು ಅನುಭವದ ನೆನಪುಗಳಷ್ಟೇ. ಜೊತೆಗೆ ಹೊಸ ಮಗುವನ್ನು ಹೇಗೆ ಕೈ ಹಿಡಿದು ಮುನ್ನಡೆಸಬೇಕು ಎಂಬುದರ ಮಾರ್ಗರ್ಶನ, ಕಾಳಜಿಯೂ ಅವರ ಮಾತುಗಳಲ್ಲಿ ಸೇರಿಕೊಂಡಿರುತ್ತದೆ.

ಆದರೆ ಇಂದು ಬದುಕಿನ ಚಿತ್ರಣವೇ ಬದಲಾಗಿದೆ. ಮಕ್ಕಳನ್ನು ಶಾಲೆಗೆ ಕಳುಹಿಸಿ, ತಮ್ಮ ಕೆಲಸ ತಾವು ನೋಡಿಕೊಳ್ಳುವುದು ಅಮ್ಮಂದಿರಿಗೆ ಸಾಧ್ಯವಾಗುತ್ತಿಲ್ಲ. ಅಮ್ಮಂದಿರ ಜವಾಬ್ದಾರಿ ನಿಜವಾಗಿಯೂ ಹೆಚ್ಚಾಗಿದೆ. ಅಷ್ಟೇ ಅಲ್ಲ, ಜವಾಬ್ದಾರಿಯನ್ನು ಹೇಗೆ ನಿರ್ವಹಿಸಬೇಕು ಎನ್ನುವ ಮಾರ್ಗದರ್ಶನವೂ ಅವರಿಗೆ ದೊರೆಯುತ್ತಿಲ್ಲ. ಮೊಮ್ಮಕ್ಕಳನ್ನು ಬೆಳೆಸುವಾಗ ಸಲಹೆ ಸೂಚನೆಗಳನ್ನು ಕೊಡುತ್ತಿದ್ದ ಅತ್ತೆ, ಮಾವ, ಅಜ್ಜ ಅಜ್ಜಿಯಂದಿರ ಮಾತುಗಳು ಇಂದಿನ ಹೊಸ ಸಂದರ್ಭದಲ್ಲಿ ಮೌಲ್ಯ ಕಳೆದುಕೊಂಡಂತಾಗಿವೆ. ಅಮ್ಮಂದಿರ ಪಾಲಿಗೆ ಸಂದರ್ಭವೇ ಗುರುವಾಗಿದ್ದು, ಮಕ್ಕಳ ಪೋಷಣೆಯೆಂಬುದು ಅವರ ಪಾಲಿಗೆ ಸವಾಲಾಗಿದೆ.

ಬದಲಾದ ಸಂದರ್ಭದಲ್ಲಿ ಅಮ್ಮಂದಿರು ಅನಿವಾರ್ಯವಾಗಿ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಮಕ್ಕಳಿಗೆ ಕಥೆಗಳನ್ನು ಓದಿ ಹೇಳುವುದು ಒಂದು ಉತ್ತಮ ವಿಧಾನ. ಒಂದು ಪುಸ್ತಕದ ಕಥೆ ಮುಗಿದ ಕೂಡಲೇ ಪಕ್ಕದ ಲೈಬ್ರರಿಗೆ ಹೋಗಿ ಮತ್ತೊಂದು ಪುಸ್ತಕವನ್ನು ತರಬಹುದು. ಪುಸ್ತಕದ ಆಯ್ಕೆಗಿಂತಲೂ ಅಲ್ಲಿಯವರೆಗೆ ನಡೆದುಹೋಗುವುದು, ಪುಸ್ತಕಗಳನ್ನು ಹುಡುಕುವ ಪ್ರಕ್ರಿಯೆಯೇ ಮಗುವಿಗೆ ನಿಜವಾದ ಪಾಠವಾಗಿರುತ್ತದೆ.

ಮೊಬೈಲ್ ಹಿಡಿದು ಆನ್‌ಲೈನ್‌ನಲ್ಲಿ ಊಟ, ಬಟ್ಟೆ ಆರ್ಡರ್ ಮಾಡುವುದನ್ನು ಮಕ್ಕಳು ಅದಾಗಲೇ ಕಲಿತಿದ್ದರೆ, ಪುಸ್ತಕಗಳನ್ನು ಆರ್ಡರ್ ಮಾಡುವ ವಿಧಾನವನ್ನೂ ತೋರಿಸಿಕೊಡಬಹುದು.

ಪಕ್ಕದ ಮನೆಯವರೊಂದಿಗೆ ಸೇರಬೇಡ ಎಂದು ತಾಕೀತು ಮಾಡುವುದನ್ನು ಖಡಾಖಂಡಿತವಾಗಿ ನಿಲ್ಲಿಸಬೇಕಾಗಿದೆ. ಮಕ್ಕಳ ಪಾಲಿಗೆ ಸ್ನೇಹ ಎನ್ನುವುದು ಎಷ್ಟೊಂದು ಅಮೂಲ್ಯವಾದ ವಿಷಯವಾಗಿದೆ ಇಂದು. ಆನ್‌ಲೈನ್ ಕ್ಲಾಸ್‌ಗೆ ಅಕ್ಕಪಕ್ಕದ ಒಬ್ಬಿಬ್ಬರು ಮಕ್ಕಳು ಸೇರಿಕೊಂಡು ಕುಳಿತರೆ ಉತ್ತಮ. ಸ್ಯಾನಿಟೈಸೇಷನ್, ಸಾಮಾಜಿಕ ಅಂತರದ ಬಗ್ಗೆ ಅಮ್ಮಂದಿರೇ ನಿಗಾ ಇಡಬೇಕಾಗುತ್ತದೆ.

ಮಕ್ಕಳು ತಮ್ಮೊಳಗೆ ಮಾತನಾಡಿಕೊಳ್ಳುವಾಗಲೇ ಅವರ ಭಾಷಾಜ್ಞಾನ ಬೆಳೆಯುತ್ತದೆ. ಆದ್ದರಿಂದ ಪಕ್ಕದ ಮನೆಗೆ ಹೋಗುವುದು, ಅಕ್ಕಪಕ್ಕದ ಮಕ್ಕಳು ಜೊತೆಯಾಗಿ ಆಡುವುದು ಮುಂತಾದವುಗಳಿಗೆ ಅವಕಾಶ ಮಾಡಿಕೊಡಿ. ಲೂಡೊ, ಹಾವು ಏಣಿ, ಕೇರಂಬೋರ್ಡು, ಚೆಸ್, ಮುಂತಾದ ಆಟ ಆಡಲು ಅವಕಾಶ ಇದ್ದರೆ, ಮಕ್ಕಳು ಜೊತೆಯಾಗಿ ಹೆಚ್ಚು ಹೊತ್ತು ಕಳೆಯುತ್ತಾರೆ. ಮಕ್ಕಳು ಮಾಡಿದ ಹೋಂವರ್ಕ್ ಅನ್ನು ಪಕ್ಕದ ಮನೆ ಆಂಟಿಗೆ ತೋರಿಸುವುದು, 'ಗುಡ್' ಎಂಬ ಶಹಬ್ಬಾಸ್ ಗಿರಿಯನ್ನು ಆಗಾಗ ಮಕ್ಕಳಿಗೆ ಕೊಡುವುದು, ಹೊಸ ವಿಚಾರವನ್ನು ತರಗತಿಯಲ್ಲಿ ಕಲಿತ ಬಗ್ಗೆ ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಲೇ ಮಕ್ಕಳೊಂದಿಗೆ ಮಾತನಾಡುವುದು ಹೀಗೆ ಅವರಲ್ಲಿ ಬೇಸರದ ಛಾಯೆ ಮೂಡದಂತೆ ಮಾಡುವುದು ಇಂದಿನ ಅಗತ್ಯ.

ಒಂದೆರಡು ವರ್ಷಗಳ ಅವಧಿಯಲ್ಲಿಯೇ ಹೊಸ ತಲೆಮಾರೊಂದು ಎಷ್ಟು ಭಿನ್ನವಾದ ಜೀವನಶೈಲಿಯನ್ನು ಬರಮಾಡಿಕೊಳ್ಳುತ್ತಿದೆ ಎಂದು ಅಚ್ಚರಿಯಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಹಳೆಯ ವ್ಯವಸ್ಥೆ ಮತ್ತೆ ಮರಳುವುದೇ? ಮರಳುವುದೇ ಆದರೆ ಎಷ್ಟೆಲ್ಲ ಬದಲಾವಣೆಯೊಂದಿಗೆ ಮರಳಲಿದೆ ಎಂಬುದು ಪೋಷಕರ ಪಾಲಿಗೆ ಕುತೂಹಲದ ವಿಷಯ.

ಪ್ರತಿಕ್ರಿಯಿಸಿ: feedback@sudha.co.in